ಆಡಳಿತ ಪಕ್ಷದ ಸದಸ್ಯರುಗಳು, ಮಂತ್ರಿಗಳು ಸದನದಲ್ಲಿ ಬಂದು ಕುಳಿತುಕೊಂಡು ಸದನವನ್ನು ನಡೆಸಬೇಕಾಗಿತ್ತು. ಆದರೆ ಒಂದು ದುರಾದೃಷ್ಟ ಏನೆಂದರೆ ವಿರೋಧ ಪಕ್ಷದವರು 30 ಜನ ಸದನಕ್ಕೆ ಬಂದಾಗಲೂ ಸಹ ಆಡಳಿತ ಪಕ್ಷದವರು 3 ಸದಸ್ಯರುಗಳು ಇರುವುದಿಲ್ಲ. ಆ ಪರಿಸ್ಥಿತಿಯಲ್ಲಿ ನಾವುಗಳು ನಿಮ್ಮ ಹತ್ತಿರ ಬಂದು ನಾವುಗಳು ಸದನಕ್ಕೆ ಬಂದಿದ್ದೇವೆ ಸದನವನ್ನು ಪ್ರಾರಂಭವನ್ನು ಮಾಡಿ ಎಂದು ಹೇಳುವಂತಹ ಮಟ್ಟಕ್ಕೆ ಬಂದಿದೆ. ಇಷ್ಟೊಂದು ಬೇಜವಾಬ್ದಾರಿಯಾದಂತಹ ಸರ್ಕಾರ, ಜನರ ಹಿತವನ್ನು ಸಂಪೂರ್ಣವಾಗಿ ಮರೆತು ನೀವುಗಳು ಕಚ್ಚಾಟದಲ್ಲಿ ತೊಡಗಿರಬೇಕಾದರೆ ನಾವು ಏನು ಹೇಳುತ್ತಿದ್ದೆವು ಎಂದರೆ ಈಗ ಶ್ರೀ ಜೆ. ಹೆಚ್. ಪಟೇಲ್‌ರು ಮುಖ್ಯಮಂತ್ರಿಗಳಾಗಿ ಇನ್ನು ಒಂದು ತಿಂಗಳುಗಳಾಗಿದೆ ಎಂದು ಹೇಳಿ ಸ್ವಲ್ಪ ಟೈಮ್‌ನ್ನು ಕೊಡೋಣವೆಂದು ಇದ್ದೆವು. ಇನ್ನು ಮುಂದೆ ಸರ್ಕಾರಕ್ಕೆ ಬಿಸಿಯನ್ನು ಮುಟ್ಟಿಸುತ್ತೇವೆ. ಸದನವನ್ನು ಹೇಗೆ ನಡೆಸುತ್ತೇವೆಂದು ಕಾದು ನೋಡಿ.

ಶ್ರೀ ರಾಮಕೃಷ್ಣ :– ಉತ್ತರ ರೆಡಿಯಾಗಿದ್ದರೆ ತೆಗೆದುಕೊಳ್ಳಿ ಎಂದು ನಾನು ಹೇಳುತ್ತೇನೆ. ಇಲ್ಲ ಎಂದರೆ ನಾಳೆ ದಿವಸ ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೆ, ಶ್ರೀ ಯಡಿಯೂರಪ್ಪ ನವರು ಮಾಟಾಳ್ ನಾಗರಾಜ್‌ರವರಿಗೆ ಧರಣಿಯನ್ನು ನಿಲ್ಲಿಸಿ ತಮ್ಮ ಸ್ಥಾನಕ್ಕೆ ಬರಬೇಕೆಂದು ವಿನಂತಿಯನ್ನು ಮಾಡಿಕೊಂಡಿದ್ದಾರೆ. ಆದ್ದರಿಂದ ಅವರು ದಯವಿಟ್ಟು ತಮ್ಮ ಸ್ಥಾನಕ್ಕೆ ಬರಬೇಕು.

ವಿಷಯ :– ಗುಡ್ಡಹಳ್ಳಿಯಲ್ಲಿ ನ್ಯಾಯಾಲಯದ ತೀರ್ಪಿನ ಸೋಗಿನಿಂದ ಮನೆಗಳ ಸಮಾಧಿ.

+ **ಶ್ರೀ ವೈ. ರಾಮಕೃಷ್ಣ :–** ಗುಡ್ಡಹಳ್ಳಿಯಲ್ಲಿ 20 ನೇ ತಾರೀಖಿನಂದು ಕೋರ್ಟ್ ಆದೇಶವನ್ನು ನೀಡಿದೆ ಎಂಬ ಸೋಗಿನಲ್ಲಿ ಸುಮಾರು 20 ನೇ ತಾರೀಖಿನಂದು ಕೋರ್ಟ್ ಆದೇಶವನ್ನು ನೀಡಿದೆ ಎಂಬ ಸೋಗಿನಲ್ಲಿ ಸುಮಾರು 22 ಆರ್.ಸಿ.ಸಿ. ಮನೆಗಳೂ ಸೇರಿ, ಮೈನ್ ರೋಡ್‌ನಲ್ಲಿ ಕಟ್ಟಿರತಕ್ಕಂತಹ ಮನೆಗಳನ್ನು ಹೊಡ್ದು ಹಾಕಿದ್ದಾರೆ. ಮಾನ್ಯ ಅಧ್ಯಕ್ಷರೆ, ನ್ಯಾಯಾಲಯವು ಕೊಟ್ಟಿರತಕ್ಕಂತಹ ತೀರ್ಪು ನನ್ನ ಹತ್ತಿರ ಇದೆ. ಅದನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಆ ತೀರ್ಪಿನಲ್ಲಿ ಏನು ಬರೆದಿದ್ದಾರೆಯೆ, ``warrant to be exeanted with the police help by breaking open lock". ಆ ಪ್ರತಿವಾದಿಯ ಮನೆಯ ಬಾಗಿಲನ್ನು ಒಡೆದು ಹಾಕಿ ಇವರಿಗೆ ವಶಕ್ಕೆ ಕೊಡಬಹುದು ಎಂದು 10-7-1996 ರಂದು ಕೊಟ್ಟಂತಹ ತೀರ್ಪಿನಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ಈ ಆರ್ಡರ್‌ನ್ನು ಉಪಯೋಗಿಸಿಕೊಂಡು "if necessary with the police help" ಎಂದು ಅವರು ಬರೆದಿರತಕ್ಕಂತಹ ಒಂದು ಪದವನ್ನು ಉಪಯೋಗಿಸಿ ಕೊಂಡು ಪ್ರತಿವಾದಿಯ ವಾದಿಗಳು ಸುಮಾರು 100 ಜನರನ್ನು ಟ್ರಕ್‌ಗಳಲ್ಲಿ ಮತ್ತು ಬುಲ್ಡೋಜರ್ ತೆಗೆದುಕೊಂಡು ಬಂದು, ನೋಡಿ ಸ್ವಾಮಿ ಇದು ಬಹಳ ಮುಖ್ಯ ವಾಗಿರುವಂಥದ್ದು. ಬುಲ್ಡೋಜರ್ ತೆಗೆದುಕೊಂಡು ಬಂದು ಪೋಲೀಸ್‌ನವರನ್ನೂ ಸಹ ಕರೆದುಕೊಂಡು ಬಂದು ಅಲ್ಲಿ ಮಾರಮರಿಯಾಗಿ ಮನೆಗಳನ್ನು ಹೊಡೆದು ಹಾಕಿದ್ದಾರೆ. ಅಲ್ಲಿ ಏನೋ ಯುದ್ಧವನ್ನು ಮಾಡಿದ ಹಾಗೆ ಮಾಡಿದ್ದಾರೆ. ಅಲ್ಲಿ ಮನೆಯಿಂದ ಹೊರಗಡೆ

ಹಾಕಿರತಕ್ಕಂತಹ ಜನರಲ್ಲಿ ಬಸರಿಯಾದಂತಹ ಹೆಂಗಸುಗಳಿದ್ದಾರೆ, ಒಂದು ತಿಂಗಳೂ ಸಹ ಆಗಿಲ್ಲ ಇನ್ನೂ ಹೆರಿಗೆ ಆಗಿ. ಮಕ್ಕಳನ್ನು ಮನೆಯಿಂದ ಹೊರಗೆ ಹಾಕಿದ್ದಾರೆ. ಸಾಮಾನುಗಳನ್ನು ಮನೆಯಿಂದ ಹೊರಗಡೆ ಬಿಸಾಕಿದ್ದಾರೆ, ರೇಡಿಯೋ, ಟಿ.ವಿ.ಗಳನ್ನು ಎಲ್ಲವನ್ನೂ ಹೊರಗಡೆ ಬಿಸಾಕಿದ್ದಾರೆ. ಅಲ್ಲಿ ಏನೇನು ಆಗಬೇಕು ಆ ರೀತಿಯಲ್ಲಿ ಮಾಡಿ ನರಕಯಾತನೆಯನ್ನು ಮಾಡಿದ್ದಾರೆ. ಕೋರ್ಟ್‌ನವರು ಕೊಟ್ಟಿರತಕ್ಕಂತಹ ಆರ್ಡರ್ ಏನು? ಪೋಲೀಸ್‌ನವರು ಯಾವ ರೀತಿಯಲ್ಲಿ ಎಕ್ಸಿಕ್ಯೂಟ್ ಮಾಡುತ್ತಿದ್ದಾರೆ? ಅದಕೋಸ್ಕರವಾಗಿ ನಾನು ತಮ್ಮಲ್ಲಿ ಅರಿಕೆಯನ್ನು ಮಾಡಿಕೊಳ್ಳುವುದೇನೆಂದರೆ ನನ್ನ ರಾಜಕೀಯ ಇತಿಹಾಸದಲ್ಲಿ ಇಂತಹ ದೌರ್ಜನ್ಯವನ್ನು ಇದುವರೆಗೆ ನೋಡಿರಲಿಲ್ಲ. ಸತ್ಯ ಹೇಳುತ್ತಿದ್ದೇನೆ. ಇಂತಹ ದೌರ್ಜನ್ಯವು ಯಾವತ್ತೂ ಸಹ ನಡೆದಿಲ್ಲ. ಆ ಮನೆಯಲ್ಲಿ ರತಕ್ಕಂತಹ ಅಮಾಯಕರನ್ನು ಕೋರ್ಟ್‌ಗೆ ಪಾರ್ಟಿಮಾಡಲಿಲ್ಲ. They are not even Respondents. ಇದು ಈ ರೀತಿಯಾದಂತಹ ಪರಿಸ್ಥಿತಿಯು ಇರುವಾಗ, ಅನ್ಯಾಯವಾಗಿ ನೋಟೀಸ್ ಇಲ್ಲದೇ ಆದರಲ್ಲಿಯೂ ಗಂಡಸರುಗಳು ಮನೆಯಲ್ಲಿ ಇಲ್ಲದಿದ್ದಾಗ, ಹೆಂಗಸರು ಮಾತ್ರ ಮನೆಯಲ್ಲಿದ್ದಾಗ ಬುಲ್ಡೋಜರ್‌ನ್ನು ತೆಗೆದುಕೊಂಡು ಹೋಗಿ ಮನೆಗಳನ್ನು ಹೊಡೆದು ಹಾಕಿ ಅವರ ಮನೆಯಲ್ಲಿದ್ದ ಸಾಮಾನುಗಳನ್ನು, ತರಕಾರಿಗಳನ್ನು, ಆಹಾರ ಧಾನ್ಯಗಳನ್ನು ಮನೆಯಿಂದ ಹೊರಗಡೆ ಬಿಸಾಕಿದ್ದಾರೆ. ಅವರ ಆಕ್ರಂದವನ್ನು ಕೇಳುವುದಕ್ಕೆ ಆಗುವುದಿಲ್ಲ. ಅದಕೋಸ್ಕರವಾಗಿ ನಾನು ತಮ್ಮಲ್ಲಿ ಅರಿಕೆಯನ್ನು ಮಾಡಿಕೊಳ್ಳುವುದೇನೆಂದರೆ, ಪೋಲೀಸರ ದೌರ್ಜನ್ಯಕ್ಕೆ ಇದು ನಮ್ಮ ರಾಜ್ಯಕ್ಕೆ ಮೊದಲನೇಯ ಉದಾಹರಣೆಯಾಗಿದೆ. ಆದುದರಿಂದ ಸಂಬಂಧಪಟ್ಟಂಥವರನ್ನು ಕೂಡಲೇ ಅಮಾನತ್ತು ಮಾಡಬೇಕು ಮತ್ತು ಸಿ.ಓ.ಡಿ. ಎನ್‌ಕ್ವೈರಿಯನ್ನು ಮಾಡಬೇಕು. ತಪ್ಪಿದ್ದರೆ ಟ್ರಕ್‌ಗಳನ್ನು ತೆಗೆದುಕೊಂಡು ನೂರಾರು ಜನರುಗಳನ್ನು ಕರೆದುಕೊಂಡು ಬಂದು, ಬುಲ್ಡೋಜರ್‌ಗಳನ್ನು ತೆಗೆದುಕೊಂಡು ಬಂದು ನಾಗರೀಕರ ಮನೆಗಳನ್ನು ಒಡೆದು ಹಾಕಿದವರಿಗೆ.....

MR. SPEAKER :- Let us her from the Govt. you have placed your demand.

SRI R. ROSHAN BAIG :- I have taken note of the views expressed by the Hon'ble Member. I will have the matter examined and I will make a detailed statement,

ಅಧ್ಯಕ್ಷರು :- ಈಗ ನೀರಾವರಿಯ ಸಚಿವರು ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದಕ್ಕೆ ಉತ್ತರವನ್ನು ಕೊಡುತ್ತೀರೋ?

(ಖೂ) ಕಬಿನಿ ಎರಡನೇ ಹಂತ ವರುಣಾ ತಾರಕಾ ಮುಂತಾದ ನೀರಾವರಿ ಕಾಮಗಾರಿಗಳ ಪ್ರಗತಿ.

+ **ಶ್ರೀ ಕೆ. ಎನ್. ನಾಗೇಗೌಡ :-** ಮಾನ್ಯ ಅಧ್ಯಕ್ಷರೆ, ಅವರು ನಾಲ್ಕು ವಿಚಾರಗಳನ್ನು ಕೇಳಿದ್ದಾರೆ. ಅದರಲ್ಲಿ ಕಬಿನಿ ಎರಡನೇ ಹಂತದ ಡೀಟೈಲ್ಡ್ ಇನ್‌ವೆಸ್ಟಿಗೇಷನ್ ಇವತ್ತು ಪ್ರಗತಿಯಲ್ಲಿದೆ. ವರುಣಕ್ಕೆ ಈಗಾಗಲೇ ಉಪಮುಖ್ಯ ಮಂತ್ರಿಗಳು ಹೇಳಿದ ಹಾಗೆ ಅವರ ಎಕ್ಸ್‌ಪೆಂಡಿಚರ್ 168 ಕೋಟಿ ರೂಪಾಯಿ ಇದೆ, ಇಲ್ಲಿಯವರೆಗೆ 69 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1996-97 ಕ್ಕೆ 32 ಕೋಟಿ ರೂಪಾಯಿ ಹಣ ಇಡಲಾಗಿದೆ. ವರುಣ ನಾಲೆ ಬಗ್ಗೆ ನಾವು ಯಾವ ರೀತಿಯ